**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ.ದಂ.ನ್ಯಾಯಾಲಯ,**

**ಶಹಾಪೂರ**

CW 4

ಸಿ.ಸಿ. ನಂ. 281/2016

| | | |
|---|---|---|
| ಹೆಸರು | ಃ | ನಬಿಲಾಲ್ |
| ತಂದೆ ಹೆಸರು | ಃ | ಹುಸೇನ ಸಾಬ್ |
| ವಯಸ್ಸು | ಃ | 63 ವರ್ಷ |
| ಉದ್ಯೋಗ | ಃ | ನಿವೃತ್ತ PSI |
| ವಾಸ | ಃ | ಶಹಾಪೂರ |

**ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು ದಿನಾಂಕಃ 07-08-2025**

**ಮುಖ್ಯ ವಿಚಾರಣೆ ಃ ದಂಡ ಪ್ರಕ್ರಿಯೇ ಸಂಹಿತೆ ಕಲಂ 299 ರ ಅಡಿಯಲ್ಲಿ ಸಹಾಯಕ ಸರಕಾರಿ ಅಭಿಯೋಜಕರವರಿಂದ ಃ**

ನಾನು 2017 ರಿಂದ 2021 ರ ವರೆಗೆ ಶಹಾಪೂರ ಪೊಲೀಸ ಠಾಣೆಯಲ್ಲಿ ASI ಎಂದು ಕರ್ತವ್ಯ ನಿರ್ವಹಿಸಿರುತ್ತೇನೆ.

2. ಈ ಮಾನ್ಯ ನ್ಯಾಯಾಲಯದಿಂದ ಆರೋಪಿತರ ಪತ್ತೆಗಾಗಿ ಹೊರಡಿಸಿರುವ ಪ್ರೊಕ್ಲೊಮೇಷನ್ ಜಾರಿಯಾಗ್ದಿರಿಂದ ದಿಃ 09-07-2020 ರಂದು ಅದನ್ನು ಪಡೆದು ಪ್ರಕಟಿಸುವುದಕ್ಕಾಗಿ ಅದೇ ದಿನ ಭೀರಗಟ್ ಜನತಾ ಕಾಲೋನಿ ಗ್ರಾಮಕ್ಕೆ ಹೋಗಿ ಅಲ್ಲಿ ಎರಡು ಜನ ಪಂಚರ ಸಮಕ್ಷಮ ಡಂಗುರವನ್ನು ಸಾರಿ, ಗ್ರಾಮ ಪಂಚಾಯತ್ ಇವರಿಗೆ ವಿಚಾರವನ್ನು ತಿಳಿಸಿ ಪ್ರತಿಯನ್ನು ಪಂಚಾಯತಿಯ ಚಾವಡಿಯ ಮೇಲಿನ ಗೋಡೆಗೆ ಹಾಗೂ 2 ನೇ ಪ್ರತಿಯನ್ನು ಭೀರಗಟ್ ಜನತಾ ಕಾಲೋನಿ ನ ಸಾರ್ವಜನಿಕ ಬಸ್ ನಿಲ್ದಾಣಗಳ ಗೊಡೆಗಳಲ್ಲಿ ಹಾಗೂ ಮೂರನೇ ಪ್ರತಿಯನ್ನು ವೀರಗೊಟ್ಟ ದೇವರ ಗುಡಿಯ ಗೊಡೆಗೆ ಅಂಟಿಸಿರುತ್ತೇನೆ. ಅದರ ಬಗ್ಗೆ ವಿವರಣೆಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಆ ಬಗ್ಗೆ ಒಂದು ಪಂಚನಾಮೆಯನ್ನು ಪಂಚರ ಸಮಕ್ಷಮ ಮಾಡಿರುತ್ತೇನೆ. ಪ್ರೊಕ್ಲೊಮೇಷನ್‌ನ್ನು ನ್ನು ಜಾರಿ ಮಾಡಿದ ಪಂಚನಾಮೆಯನ್ನು ನಿಪಿ.7 ಎಂದು, ಅದರ ಮೇಲಿರುವ ಸಾಕ್ಷಿಯ ಸಹಿಯನ್ನು ನಿಪಿ.7(ಎ) ಎಂದು ಗುರುತಿಸಲಾಯಿತು.

**ಮರು ವಿಚಾರಣೆಃ ಇಲ್ಲ**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ.ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಶಹಾಪೂರ.